ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯ

**Karnataka State Rural Development and Panchayat Raj University**

ರೈತ ಭವನ, ಜನರಲ್‌ಕಾರ್ಯಪ್ಪ ವೃತ್ತ, ಗದಗ– 582 101

RaithaBhavana, General Cariappa Circle, Gadag – 582 101

E-mail: ksrdpruadmissions@gmail.com Phone: 08372-230338, Fax: 08372-297343

**News about "Sabaramati Ashram" Published in "Karantaka Vikas" Monthly Magazine Dec-2020**



ವರದಿ

ಪ್ರಕಾಶ ಎಸ್. ಮಾಚೇನಹಳ್ಳಿ

ಉಪನ್ಯಾಸಕರು, ಆರ್.ಡಿ.ಪಿ.ಆರ್. ವಿಭಾಗ ಹಾಗೂ ಸಂಚಾಲಕರು, ಸಬರಮತಿ ಆಶ್ರಮ, ಕೆ.ಎಸ್.ಆರ್.ಡಿ.ಪಿ.ಆರ್. ವಿಶ್ವವಿದ್ಯಾಲಯ, ಗದಗ.

ಗಾಂಧಿಜಿಯವರು ಗದಗ್ ಜಿಲ್ಲೆಗೆ ಭೇಟಿ ನೀಡಿದ ದಿನವನ್ನು ಚಿರಸ್ಮರಣೀಯವಾಗಿಸುವ ಹಿನ್ನಲೆಯಲ್ಲಿ 11ನೇ ನವೆಂಬರ್ 2020 ರಂದು ಲೋಕರ್ಪಣೆಗೊಂಡ ವಿಶ್ವವಿದ್ಯಾಲಯದ ಸಬರಮತಿ ಆಶ್ರಮವು ಉತ್ತರ ಕರ್ನಾಟಕ ಭಾಗದಲ್ಲಿ ಸ್ಥಾಪನೆಗೊಂಡ ಗಾಂಧಿ ಸಬರಮತಿ ಆಶ್ರಮದ ಮೊದಲ ಪ್ರತಿರೂಪವಾಗಿದೆ.

## ವಿಶ್ವವಿದ್ಯಾಲಯದಲ್ಲಿ ಪ್ರೇರಣಾ ಕ್ರೇಂದ್ರ ಸ್ಥಾಪನೆ

2016 ರಂದು ಗದಗ ನಗರದಲ್ಲಿ ಸ್ಥಾಪನೆಗೊಂಡಿರುವ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ಮಹಾತ್ಮ ಗಾಂಧೀಜಿಯವರ ತತ್ವ, ಚಿಂತನೆ ಮತ್ತು ಆದರ್ಶಗಳ ಅಡಿಯಲ್ಲಿ ಸಮಗ್ರ ಗ್ರಾಮೀಣಾಭಿವೃದ್ಧಿಗೆ ಪೂರಕವಾದಂತಹ ಅನೇಕ ಕಾರ್ಯಯೋಜನೆಗಳನ್ನು ರೂಪಿಸಿ, ಅವುಗಳ ಕಾರ್ಯ ಅನುಷ್ಠಾನ ಮತ್ತು ಪ್ರತಿಫಲ ಕುರಿತಂತೆ ವ್ಯವಸ್ಥಿತ ಶ್ರಮವನ್ನು ವಹಿಸುತ್ತಿದೆ.

ಗಾಂಧೀಜಿಯವರ ವಿಚಾರಧಾರೆ ಹಾಗೂ ಗ್ರಾಮ ಸ್ವರಾಜ್ ಪರಿಕಲ್ಪನೆ ಆಧರಿತವಾಗಿ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳುವ ಮತ್ತು ಅವುಗಳನ್ನು ವಿದ್ಯಾರ್ಥಿ, ಯುವ ಪೀಳಿಗೆಯಲ್ಲಿ ರೂಢಿಸುವ ಧ್ಯೇಯೋದ್ದೇಶದೊಂದಿಗೆ ಹಾಗೂ ಜನರಿಗೆ ಇವುಗಳನ್ನು ತಲುಪಿಸುವ ಹಿನ್ನಲೆಯೊಂದಿಗೆ ಒಂದು ಪ್ರೇರಣಾ ಕೇಂದ್ರದ ರೂಪಕವಾಗಿ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ಆವರಣದಲ್ಲಿ ಗುಜರಾತಿನ ಅಹಮದಾಬಾದ್‌ನಲ್ಲಿರುವ ಸಬರಮತಿ ಆಶ್ರಮದ ಪ್ರತಿಕೃತಿ ಕಟ್ಟಡವನ್ನು ನಿರ್ಮಿಸಲಾಗಿದೆ.

ಮಹಾತ್ಮ ಗಾಂಧೀಜಿ ಅವರು 11 ನೇ ನವೆಂಬರ್ 1920 ರಂದು ಗದಗ್ ಜಿಲ್ಲೆಗೆ ಮೊಟ್ಟ ಮೊದಲು ಭೇಟಿಯನ್ನು ನೀಡಿದ್ದರು. ಈ ಸಂತಸದ ಸಂಗತಿಗೆ ಇದೇ ತಿಂಗಳು ಅಂದರೆ, ನವೆಂಬರ್ 11, 2020ಕ್ಕೆ ನೂರು ವರ್ಷ ತುಂಬಿದೆ. ಈ ಸಂತಸದ ಸಂಗತಿಯನ್ನು ಅವಿಸ್ಮರಣೀಯಗೊಳಿಸುವ ನಿಟ್ಟಿನಲ್ಲಿ ವಿಶ್ವವಿದ್ಯಾಲಯದಲ್ಲಿ ಸ್ಥಾಪನೆಗೊಂಡಂತಹ ಈ ಪ್ರತಿಕೃತಿ ಸಬರಮತಿ ಆಶ್ರಮವನ್ನು ಕರ್ನಾಟಕ ಸರ್ಕಾರದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಚಿವರಾದ ಶ್ರೀ. ಕೆ. ಎಸ್. ಈಶ್ವರಪ್ಪ ಅವರು 11 ನೇ ನವೆಂಬರ್ 2020 ರಂದು ಲೋಕರ್ಪಣೆಗೊಳಿಸಿದರು.

ಸಬರಮತಿ ಆಶ್ರಮದ ಲೋಕರ್ಪಣೆ ಹಾಗೂ ಗದಗ ಜಿಲ್ಲೆಗೆ ಗಾಂಧೀಜಿ ಭೇಟಿ ನೀಡಿದ ಶತಮಾನೋತ್ಸವದ ಸಮಾರಂಭಕ್ಕೆ ಹಾವೇರಿ – ಗದಗ್ ಕ್ಷೇತ್ರದ ಸಂಸದರಾದ ಶ್ರೀ. ಶಿವಕುಮಾರ ಉದಾಸಿ, ರಾಜ್ಯದ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಸಚಿವರಾದ ಶ್ರೀ.ಸಿ. ಸಿ. ಪಾಟೀಲ್, ಶಾಸಕರಾದ ಹಾಗೂ ಗದಗ್ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ.ಎಚ್. ಕೆ. ಪಾಟೀಲ, ವಿಧಾನ ಪರಿಷತ್ ಸದಸ್ಯರಾದ ಶ್ರೀ. ಎಸ್. ವಿ. ಸಂಕನೂರು, ಮಾಜಿ ಶಾಸಕರಾದ ಶ್ರೀ.ಡಿ. ಆರ್. ಪಾಟೀಲ, ಗದಗ್ ಜಿ. ಪಂ. ಅಧ್ಯಕ್ಷರಾದ ಶ್ರೀ.ರಾಜುಗೌಡ ಹಾಗೂ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಉಮಾ ಮಹಾದೇವನ್, ಜಿಲ್ಲಾಧಿಕಾರಿ ಎಂ. ಸುಂದರೇಶ ಬಾಬು ಒಳಗೊಂಡಂತೆ ಅನೇಕ ಗಣ್ಯರು ಸಾಕ್ಷಿಯಾದರು.

ಸಮಾರಂಭದ ಪೂರಕವಾಗಿ ವಿಶ್ವವಿದ್ಯಾಲಯದಲ್ಲಿ ನಿರ್ಮಿತಗೊಂಡ 'ಭೋಜನಾಲಯ' ಕಟ್ಟಡವನ್ನು ಶಾಸಕರಾದ ಶ್ರೀ. ಎಚ್. ಕೆ. ಪಾಟೀಲ್ ರವರು ಉದ್ಘಾಟಿಸಿದರು. ವಿಶ್ವವಿದ್ಯಾಲಯದ ತರಬೇತಿ, ಪ್ರಕಟನೆ ಮತ್ತು ಮೇಲ್ವಿಚಾರಣೆ ಕೇಂದ್ರದಿಂದ ಪ್ರಕಟಿಸಿದ 'ಗದಗ್ ಜಿಲ್ಲೆಯಲ್ಲಿ ಗಾಂಧೀಜಿ' ಎಂಬ ಕೃತಿಯನ್ನು ಸಂಸದರಾದ ಶ್ರೀ. ಶಿವಕುಮಾರ್ ಉದಾಸಿ ಅವರು ಬಿಡುಗಡೆಗೊಳಿಸಿದರು ಹಾಗೂ 'ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯ ಆಯಾಮಗಳು' ಎಂಬ ಕೃತಿಯನ್ನು ಸಚಿವರಾದ ಶ್ರೀ. ಸಿ. ಸಿ. ಪಾಟೀಲರವರು ಬಿಡುಗಡೆಗೊಳಿಸಿದರು.

ಗಾಂಧಿಜಿಯವರು ಗದಗ್ ಜಿಲ್ಲೆಗೆ ಭೇಟಿ ನೀಡಿದ ದಿನವನ್ನು ಚಿರಸ್ಮರಣೀಯವಾಗಿಸುವ ಹಿನ್ನಲೆಯಲ್ಲಿ 11ನೇ ನವೆಂಬರ್ 2020 ರಂದು ಲೋಕರ್ಪಣೆಗೊಂಡ ವಿಶ್ವವಿದ್ಯಾಲಯದ ಸಬರಮತಿ ಆಶ್ರಮವು ಉತ್ತರ ಕರ್ನಾಟಕ ಭಾಗದಲ್ಲಿ ಸ್ಥಾಪನೆಗೊಂಡ ಗಾಂಧಿ ಸಬರಮತಿ ಆಶ್ರಮದ ಮೊದಲ ಪ್ರತಿರೂಪವಾಗಿದೆ. ಇದು ಪ್ರಾರ್ಥನಾ ಮಂದಿರ, ಕಸ್ತೂರಬಾ ಮಂದಿರ, ನಯೀ ತಾಲೀಮ್ ಮಂದಿರ, ಧ್ಯಾನ ಮಂದಿರ, ಗಾಂಧಿ ವಾಚನಾಲಯ ಮತ್ತು ಗಾಂಧಿಜ್ಞಾನ ಮೂರ್ತಿಯನ್ನು ಒಳಗೊಂಡಿದೆ.

ಆಶ್ರಮದ ಪ್ರಾರ್ಥನಾ ಮಂದಿರದಲ್ಲಿ ಗಾಂಧೀಜಿಯವರು ಬಳಸಿದ ಚರಕ, ಟೇಬಲ್, ಊರುಗೋಲು, ದಿಂಬು ಮತ್ತು ಕನ್ನಡಕಗಳ ಪ್ರತಿರೂಪಗಳನ್ನು ಸ್ಥಳೀಯವಾಗಿ ತಯಾರಿಸಿ ಇಡಲಾಗಿದೆ. ಕಸ್ತೂರಬಾ ಮಂದಿರವು ಕಸ್ತೂರಬಾ ಅವರ ಜೀವನ ಸಂದೇಶಗಳನ್ನು ಒಳಗೊಂಡಿದೆ. ನಯೀ ತಾಲೀಮ್ ಮಂದಿರವು ಗ್ರಾಮೀಣ ಕರಕುಶಲತೆ ಹಾಗೂ ಗ್ರಾಮ ಉದ್ಯಮಕ್ಕೆ ಸಂಬಂಧಿಸಿದ ಪರಿಕರಗಳಿಂದ ಕೂಡಿದೆ. ಗಾಂಧಿ ವಾಚನಾಲಯವು ಗಾಂಧೀಜಿಯವರ ಜೀವನ, ತತ್ವ ಮತ್ತು ಚಿಂತನೆಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಒಳಗೊಂಡಿದೆ. ಧ್ಯಾನ ಮಂದಿರವು ಧ್ಯಾನಕ್ಕೆ ಸಂಬಂಧಿಸಿದ ಸಂಕೇತಗಳೊಂದಿಗೆ ಕೂಡಿದೆ. ಆಶ್ರಮವು ಗಾಂಧೀಜಿಯವರ ಸಂಪೂರ್ಣ ಜೀವನ ಚಿತ್ರಣವನ್ನು ಬಿಂಬಿಸುವ ಛಾಯಾಚಿತ್ರಗಳ ಸಂದೇಶಗಳಿಂದ ಕೂಡಿದೆ.

ಆಶ್ರಮದ ಮೂಲಕ ರಾಷ್ಟ್ರೀಯ, ಶೈಕ್ಷಣಿಕ, ಸಾಮಾಜಿಕ, ಆರ್ಥಿಕ ಹಾಗೂ ಕೌಶಲ್ಯಭಿವೃದ್ಧಿ ಚಟುವಟಿಕೆಗಳನ್ನು ನಡೆಸುವ ಉದ್ದೇಶವನ್ನು ಹೊಂದಲಾಗಿದ್ದು ಜೊತೆಗೆ ವಿದ್ಯಾರ್ಥಿಗಳಿಗೆ ಲಾಭದಾಯಕ ಕೃಷಿ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಕುರಿತಂತೆ ತರಬೇತಿಯನ್ನು ನೀಡುವ ಹಾಗೂ ಗಾಂಧಿ ಚಿಂತನ – ಮಂಥನ ಕಾರ್ಯಕ್ರಮಗಳನ್ನು ಸಂಯೋಜಿಸುವ ಆಲೋಚನೆಯೊಂದಿಗೆ ಆಶ್ರಮವನ್ನು ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳ ಮಾರ್ಗದರ್ಶನ ಹಾಗೂ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಹಕಾರದೊಂದಿಗೆ ಗ್ರಾಮೀಣಾಭಿವೃದ್ಧಿಯ ಮುಖ್ಯ ಕೇಂದ್ರವಾಗಿಸುವ ಗುರಿಯನ್ನು ಹೊಂದಲಾಗಿದೆ. ಈ ಆಶ್ರಮವು ಡಿಸೆಂಬರ್ 01, 2020 ರಂದು ಸಾರ್ವಜನಿಕ ವೀಕ್ಷಣೆಗೆ ತೆರೆದುಕೊಳ್ಳಲಿದೆ. ◆

ಕರ್ನಾಟಕ ವಿಕಾಸ KARNATAKA VIKASA 25 ಡಿಸೆಂಬರ್ 2020 DECEMBER 2020

26 ಡಿಸೆಂಬರ್ 2020 DECEMBER 2020